ಸಿ.ಸಿ ನಂಬ್ರಃ 607/2023
ಪಿ.ಡಬ್ಲ್ಯೂ : 1

ದಿನಾಂಕಃ 18-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ವೈ ಟಿ ಆರ್. ವಕೀಲರಿಂದ

1. ರವಿ ಸೋಮಯಾಜಿಯವರಿಗೆ ಒಡೆಯರ್ ಎಂದು ಕರೆಯುತ್ತಾರೆ. ಅವರು ಬ್ರಾಹ್ಮಣರು. ನಾನು ರವಿ ಸೋಮಯಾಜಿಯವರಿಗೆ 3 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ನಾನು 2021 ಮೇ ರಲ್ಲಿ ರವಿ ಸೋಮಯಾಜಿಯವರಿಗೆ 3 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ಮಾರ್ಚ್ 29 ರಂದು ನಾನು ಆರೋಪಿಗೆ 2 ಲಕ್ಷ ಹಣ ಕೊಟ್ಟಿರುತ್ತೇನೆ. ನನ್ನ ಬಳಿ 15 ದಿನ ಚೆಕ್ ಇತ್ತು. ಚೆಕ್ ನನ್ನ ಬಳಿ 3 - 4 ತಿಂಗಳು ಇತ್ತು. ಆರೋಪಿತ ನಮ್ಮ ಮನೆಗೆ ಬಂದು ಚೆಕ್ ಕೊಟ್ಟಿರುತ್ತಾನೆ. ಹಣ ಕೊಟ್ಟ ನಂತರ ನಾನು ಆರೋಪಿಯ ಜೊತೆಗೆ ಫೋನ್‌ನಲ್ಲಿ ಮಾತಾನಾಡಿರುತ್ತೇನೆ. ನೇರವಾಗಿ ಬೇಟಿ ಆಗಿರುವುದಿಲ್ಲ. ಆರೋಪಿತ ರವಿ ಸೋಮಯಾಜಿಯವರನ್ನು ಬೇಟಿ ಆಗಿರುವುದಿಲ್ಲ.

2. ನಾನು ಹಣ ಕೊಡುವ ಸಮಯದಲ್ಲಿ ಮನೆ ರೆಡಿ ಆಗುತ್ತಿತ್ತು. ನಾನು ಟೈಲ್ಸ್ ನ್ನು ಆರೋಪಿಯ ಅಂಗಡಿಯಿಂದ ತಂದಿರುತ್ತೇನೆ. ನಾನು 2 ಲಕ್ಷದವರೆಗೆ ಗ್ರಾನೈಟ್ ನ್ನು ನಗದು ಕೊಟ್ಟು ತೆಗೆದುಕೊಂಡು ಬಂದಿರುತ್ತೇನೆ. ರವಿ ಸೋಮಯಾಜಿಯವರು ಆರೋಪಿಗೆ ಹಣ ಹಾಕಿದ ಬಗ್ಗೆ ಗೊತ್ತಿರುತ್ತದೆ. ಸಾಕ್ಷಿ ಅದಕ್ಕೆ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ಮಾರ್ಚ್ 29 ನೇ ತಾರೀಖು 4 ಗಂಟೆ 49 ನಿಮಿಷಕ್ಕೆ ಹಣ ಹಾಕಿರುತ್ತಾರೆ. ವಿದ್ಯಾನಂದರವರೇ ಅವರ ಖಾತೆಗೆ ರವಿ ಸೋಮಯಾಜಿಯವರಿಂದ ಹಣ ಹಾಕಿಸಿಕೊಂಡಿರುತ್ತಾರೆ.

3. ಈ ಕೇಸಿಗೆ ಸಂಬಂಧಿಸಿದಂತೆ ಆರೋಪಿಗೆ ವಕೀಲರ ಮುಖಾಂತರ ನೋಟಿಸು ಕೊಟ್ಟಿರುತ್ತೇನೆ. ನಿ.ಪಿ.3 ರಲ್ಲಿರುವ ವಿಳಾಸ ನಮ್ಮ ವಕೀಲರದ್ದು ಇರುತ್ತದೆ. ಸಾಕ್ಷಿಗೆ ಒಂದು ಹಿಂದಿರುಗಿದ RPAD ಕವರ್ ತೋರಿಸಿದ್ದು RPAD ಕವರ್ ನಲ್ಲಿರುವ ವಿಳಾಸ ಒಂದೇ ಎಂದರೆ ಸಾಕ್ಷಿ ವಿಳಾಸ ಒಂದೇ ಇರುತ್ತದೆ ಎಂದು ಹೇಳಿದ್ದು ಸದರಿ RPAD ಕವರ್ ನ್ನು ನಿ.ಡಿ. **1** ಎಂದು ಗುರುತಿಸಲಾಯಿತು. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲ. ರವಿ ಸೋಮಯಾಜಿಯವರು ಆದಾಯ ತೆರಿಗೆ ಪಾವತಿಸುವ ಬಗ್ಗೆ ಗೊತ್ತಿರುವುದಿಲ್ಲ. ರವಿ

ಸೋಮಯಾಜಿಯವರನ್ನು ನ್ಯಾಯಲಯಕ್ಕೆ ಕರೆದುಕೊಂಡು ಬಂದು ಸಾಕ್ಷಿ ಹೇಳಿಸಬಹುದು.

4. ನಾನು ರವಿ ಸೋಮಯಾಜಿಯವರಿಗೆ ನನಗೆ ಹಣ ಬಂದ ಕೂಡಲೇ ವಾಪಾಸು ಕೊಡುತ್ತೇನೆ ಎಂದು ಹೇಳಿ ಅವರಿಂದ ಹಣ ತೆಗೆದುಕೊಂಡು ಬಂದಿರುತ್ತೇನೆ. ಒಡೆಯರ್ ಗೆ ಹಣ ವಾಪಾಸು ಕೊಟ್ಟಿರುತ್ತೇನೆ ಎಂದು ಆರೋಪಿಗೆ ಹೇಳಿರುವುದಿಲ್ಲ, ಸಾಕ್ಷಿ ಆತನು ನನ್ನ ಫೋನ್ ನ್ನು ಎತ್ತುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮೋಗವೀರ ಜಾತಿಯವ ಎಂದು ಆರೋಪಿಗೆ ಫೋನ್‌ನಲ್ಲಿ ಹೇಳಿರುವುದಿಲ್ಲ. ಅವರಿಗೆ ನಾನು ಮೋಗವೀರ ಜಾತಿ ಎಂದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಒಡೆಯರ್ ರವರು ನನ್ನ ಕಡೆಯಿಂದ ಬಡ್ಡಿ ತೆಗೆದುಕೊಂಡಿರುವುದಿಲ್ಲ.

5. ಟೈಲ್ಸ್ ಗಳನ್ನು ನಾನು ವಾಪಾಸು ಕೊಟ್ಟಿರುವುದಿಲ್ಲ. 4 ತಿಂಗಳು ಚೆಕ್ ನನ್ನ ಬಳಿ ಇರುವಾಗ ಆರೋಪಿಯ ಜೊತೆಗೆ ಫೋನ್ ನಲ್ಲಿ ಮಾತನಾಡುತ್ತಿದ್ದೆ. ನೇರವಾಗಿ ಸಿಕ್ಕಿರುವುದಿಲ್ಲ. ಆರೋಪಿತ 15 ದಿನ ಬಿಟ್ಟು ಚೆಕ್ ನ್ನು ಹಾಕಿ ಎಂದು ಹೇಳಿರುತ್ತಾನೆ. ತದನಂತರ ಫೋನ್ ಎತ್ತುತ್ತಿರಲಿಲ್ಲ. ಪುನಃ ಸಾಕ್ಷಿಗೆ 4 ತಿಂಗಳು ಬಿಟ್ಟು ಚೆಕ್ ಹಾಕುವಾಗ ಆರೋಪಿಗೆ ಕರೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಆತ ನನ್ನ ಫೋನ್ ಎತ್ತುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ದೂರಿನಲ್ಲಿ ಬರೆಸಿರುವುದಿಲ್ಲ. ನನಗೆ ವಿದ್ಯಾಭ್ಯಾಸ ಇರುವುದಿಲ್ಲ. ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಓದಲು ಸ್ವಲ್ಪ ಸ್ವಲ್ಪ ಬರುತ್ತದೆ. ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ ಎಂದರೆ ನನ್ನ ಸಹಿ ಹಾಕುತ್ತೇನೆ ಎಂದು ನುಡಿಯುತ್ತಾರೆ.

6. ಹಣದ ವ್ಯವಹಾರದ ಬಗ್ಗೆ ನನಗೆ ಸಾಮಾನ್ಯ ಜ್ಞಾನ ಇರುತ್ತದೆ. ಎಪ್ರೀಲ್ 15, 2021 ರ ಮೇಲೆ ನಾನು ಮನೆ ಕಟ್ಟಲು ಸಾಲವನ್ನು ಪಡೆದುಕೊಂಡಿರುತ್ತೇನೆ. ಸಾಲ ಇನ್ನು ಬಾಕಿ ಇರುತ್ತದೆ. 50 ರಿಂದ 60 ಸಾವಿರ ಚಿನ್ನದ ಸಾಲ ಇರುತ್ತದೆ. ಬೋಟಿಗಾಗಿ 8 ಲಕ್ಷ ಸಾಲ ಮಾಡಿರುತ್ತೇನೆ. ಈಗ ಆ ಬೋಟನ್ನು ಮಾರಾಟ ಮಾಡಿರುತ್ತೇನೆ. 2021 ರ ಲ್ಲಿ ಬೋಟಿನ ಮೇಲೆ 8 ರಿಂದ 9 ಲಕ್ಷ ಸಾಲ ಇತ್ತು. ಒಡೆಯರ ಮೇಲೆ ನನಗೆ ಈಗಲೂ ಸಹ ಅಪಾರ ಗೌರವ ಇರುತ್ತದೆ. ಅವರು ಯಾವುದೇ ವಿಚಾರ ಹೇಳಿದರೂ ನಾನು ಕೇಳುತ್ತೇನೆ.

7. ಲಕ್ಷ್ಮೀ ಗ್ರಾನೈಟ್ ಆರೋಪಿಯ ಅಂಗಡಿಗೆ ಸುಮಾರು ಬಾರಿ ಹೋಗಿರುತ್ತೇನೆ. ನಾನು ಅವರ ಕ್ಯಾಬಿನ್ ಒಳಗೆ ಕುಳಿತು ಮಾತನಾಡುತ್ತಿದ್ದೆ. ಆ ಸಮಯದಲ್ಲಿ ದಾಖಲೆಗಳು ಇದ್ದಿರುತ್ತದೆ ಎಂದರೆ ಸಾಕ್ಷಿ ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ರವಿ

ಸೋಮಯಾಜಿಯವರ ಮುಖಾಂತರ ಪಡೆದುಕೊಂಡ ಹಣವನ್ನು ಆರೋಪಿತ ಬ್ಯಾಂಕಿನ ಮುಖಾಂತರ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಅವರ ಬಳಿ ಬ್ಯಾಂಕಿನ ದಾಖಲೆ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರವಿ ಸೋಮಯಾಜಿಯವರಿಗೆ ಮತ್ತು ಆರೋಪಿಗೆ ಸಂಪರ್ಕವೇ ಇರುವುದಿಲ್ಲ. ನನ್ನ ಮುಖಾಂತರ ಮಾತ್ರ ಪರಿಚಯ ಆಗಿರುತ್ತದೆ ಎಂದು ನುಡಿಯುತ್ತಾರೆ.

8. ಒಡೆಯರ ಬಳಿ ನಾನು ಆರೋಪಿತ ಹಣ ಕೊಟ್ಟ ಬಗ್ಗೆ ಕೇಳಿರುತ್ತೇನೆ. ಅವರು ಹಣ ಕೊಟ್ಟಿರುವುದಿಲ್ಲ ಎಂದು ಹೇಳಿರುತ್ತಾರೆ. ಒಡೆಯರ ಬಳಿ ಹಣ ತೆಗೆದುಕೊಂಡ ಸಮಯದಲ್ಲಿ ಚೆಕ್ ಕೊಟ್ಟಿರುತ್ತೇನೆ ಎಂದು ಆರೋಪಿತ ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಅವರ ಅಂಗಡಿಗೆ ಬೇಟಿ ಕೊಟ್ಟಾಗ ಅಲ್ಲಿ ಇದ್ದತಹ ದಾಖಲೆ ಹಾಗೂ ಚೆಕ್ ನ್ನು ತೆಗೆದುಕೊಂಡು ಹೋಗಿರುವ ಸಂದರ್ಭ ಇವೆ ಎಂದು ಹೇಳುತ್ತಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪ್ರಶ್ನಿತ ನಿ.ಸಿ. 1 ನ್ನು ಸಾಲದ ಭಾಧ್ಯತೆಗಾಗಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನಿಂದ ಆರೋಪಿತ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಹಾಗೂ ಆತ ಕೊಡಲು ಭಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ರವಿ ಸೋಮಯಾಜಿಯವರೊಂದಿಗೆ ಶಾಮಿಲಾಗಿ ದುರ್ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**